ಮೂಲ ದಾವಾ ಸಂಖ್ಯೆ 35/2018

ಡಿ ಡಬ್ಲ್ಯೂ-1

**(ದಿನಾಂಕ 23.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ G.V. ವಕೀಲರಿಂದಃ-**

ಕ್ರಯ ಪತ್ರ ಆಗುವ ಸಮಯದಲ್ಲಿ ನನಗೆ 22 ವರ್ಷ ಆಗಿತ್ತು ಎಂದರೆ ಸರಿ. ನನಗೆ ಆದ ಸ್ವತಂತ್ರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯ ದಿಂದ ಮತ್ತು ಪಿತ್ರಾರ್ಜಿತ ಆಸ್ತಿ ಯಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಐಟಂ ನಂಬರ 4, 1 ಎಕರೆ 50 ಸೆಂಟ್ಸ ಖರೀದಿಸಿದಾಗ ನಿ ಡಿ 8 ಖರೀದಿಸಿದಾಗ ನನಗೆ 19 ವರ್ಷ ವಯಸ್ಸು ಇತ್ತು ಎಂದರೆ ಸರಿ. ಸದರಿ ಜಮೀನು ಕೂಡ ಪಿತ್ರಾರ್ಜಿತ ಮತುತ ಒಟ್ಟು ಕುಟುಂಬದ ಆದಾಯ ದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಐಟಂ ನಂಬರ 5 ಸರ್ವೆ ನಂಬರ 365 ಎ 1 ಎಕರೆ ಪಿತ್ರಾರ್ಜಿತ ವತ್ತು ಒಟ್ಟು ಕುಟುಂಬ ಮತ್ತು ವಾದಿಯ ಆದಾಯ ದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿ ಐಟಂ ನಂಬರ 1 ಮಂಜಪ್ಪನ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಪಿತ್ರಾರ್ಜಿತ ವತ್ತು ಒಟ್ಟು ಕುಟುಂಬ ಮತ್ತು ವಾದಿಯ ಆದಾಯ ದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂಬರ 1 ನ್ಯಾಯಾಲಯ ದಿಂದ ತಡೆ ಆಜ್ಞೆ ಇದ್ದಾಗ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಾನು 13 ನೇ ವರ್ಷದಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಇಟ್ಟಿಗಿ ಭಟ್ಟಿ ಮಾಡುತ್ತಿದ್ದೆ ಟ್ಯಾಕ್ಸ ಕಟ್ಟುತ್ತಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕಿಂತ ಪೂರ್ವದಲ್ಲಿಯೇ ದಾವಾ ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾದ ಎ ವತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬ ಮತ್ತು ವಾದಿಯ ಆದಾಯ ದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದುಡಿಮೆ ಮಾಡುತ್ತಿದ್ದ

ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ಕೂಲಿ ಕೆಲಸಕ್ಕೆ ದಾಖಲೆ ಕೊಡಲು ಬರುವುದಿಲ್ಲಾ. 13 ವರ್ಷ ದವನಿದ್ದಾಗ ಯಾರು ಕೆಲಕ್ಕೆ ಕರೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಾು ಪ್ರತಿವಾದಿ ಕೆಂಚಪ್ಪ ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲಾ ಎಂದರೆ ಸರಿ. ಮಂಜಪ್ಪನಿಗೆ ಕೆಂಚಪ್ಪನಿಗೆ ಅನುಕೂಲ ಆಗಲಿ ಅಂತಾ ವಾದಿಗೆ ಆಸ್ತಿ ಕೊಡಬೇಕಾಗುತತ್ತಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜಪ್ಪ ಬಹಳ ಮಧ್ಯ ಕುಡಿದು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಹಣವನ್ನು ಮಧ್ಯಪಾನಕ್ಕೆ ಖರ್ಚು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ವತ್ತು ಒಟ್ಟು ಕುಟುಂಬ ಮತ್ತು ವಾದಿಯ ಆದಾಯ ದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವ ವರ್ಷದಲ್ಲಿ ಟ್ಯಾಕ್ಸ ಕಟ್ಟಿರುತ್ತೇನೆ ಗೊತ್ತಿಲ್ಲಾ. ಯಾವ ವರ್ಷದಲ್ಲಿ ಮಂಜಪ್ಪ ಟ್ಯಾಕ್ಸ ಕಟ್ಟಿದ್ದರು ಗೊತ್ತಿಲ್ಲಾ. ವಾದಿಗೆ ಹಿಸ್ಸೆ ಕೊಡುವುದನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.